

# ಆರ್ಯರು ಹೊರಗಿನಿಂದ ಬಂದರೆ?

ಸ್ವಾಮಿ ಸತ್ಯವಿದಾನಂದ

ಆರ್ಯರು ಹೊರಗಿನಿಂದ ಬಂದವರಲ್ಲ ಎಂದು ಸ್ವಾಮಿ ವಿವೇಕಾನಂದರು ದೃಢವಾಗಿ ನಂಬಿದ್ದರು. ಈ ನಂಬಿಕೆಗೆ ಆಧಾರವಾಗಿ ಈಗ ಅನೇಕ ವೈಜ್ಞಾನಿಕ ಮತ್ತು ಪ್ರಾಕ್ತನ ಶಾಸ್ತ್ರದ ಪುರಾವೆಗಳು ಸಿಕ್ಕಿವೆ. ಇವುಗಳ ಆಧಾರದ ಮೇಲೆ ಈ ಕಿರು ಲೇಖನವನ್ನು ಬರೆದ ಸ್ವಾಮಿ ಸತ್ಯವಿದಾನಂದರು ಮಧುರೆಯ ಶ್ರೀರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

**ಪ್ರಪಂಚದ** ಅತಿ ಪ್ರಾಚೀನ ಗ್ರಂಥಗಳಲ್ಲಿ ಒಂದು ಋಗ್ವೇದ. ಇದು ಸುಮಾರು ಕ್ರಿ.ಪೂ. ೩೦೦೦ ವರ್ಷಗಳಷ್ಟು ಹಳೆಯದು ಎಂದು ನಾವು ಚರಿತ್ರೆಯಲ್ಲಿ ಓದಿದ್ದೇವೆ. ಇದನ್ನು ನಮ್ಮ ಮಕ್ಕಳಿಗೂ ಕಲಿಸುತ್ತಿದ್ದೇವೆ. ಈ ಋಗ್ವೇದ ಮತ್ತು ಇದರ ಕರ್ತರು ಎಂದು ಪ್ರಸಿದ್ಧರಾಗಿರುವ 'ಆರ್ಯರ' ಬಗ್ಗೆ ನಾವು ಬಹಳಷ್ಟು ಓದಿದ್ದೇವೆ, ಕೇಳಿದ್ದೇವೆ, ತಿಳಿದಿದ್ದೇವೆ. ನಮಗೆ ನಮ್ಮ ಚರಿತ್ರೆ ಕಲಿಸಿದ ಉಪಾಧ್ಯಾಯರುಗಳು ಸಹ ಈ ವಿಷಯವನ್ನು ಒತ್ತಿ ಒತ್ತಿ ಹೇಳಿದ್ದರು. 'ಆರ್ಯರು ಮಧ್ಯ ಏಷ್ಯಾದಿಂದ ವಲಸೆ ಬಂದರು, ಅವರಲ್ಲಿದ್ದ ಆಯುಧ ತಂತ್ರಜ್ಞತೆ ಮತ್ತು ಮುಂದುವರೆದ ನಾಗರಿಕತೆ—ಇವೆಲ್ಲವುಗಳಿಂದ ಅವರಿಗೆ ಭಾರತದ ವಾಸಿಗಳಾದ ದ್ರಾವಿಡರ ಮೇಲೆ ತಮ್ಮ ಪ್ರಭಾವ ಬೀರಲು ಸಾಧ್ಯವಾಯಿತು' ಎಂದೆಲ್ಲ ನಾವು ಚರಿತ್ರೆಯ ಮೂಲಕ ತಿಳಿದಿದ್ದೇವೆ. ಜೀವನದ ಎಲ್ಲಾ ಆಯಾಮಗಳಲ್ಲಿಯೂ ಅವರ ಪ್ರಭಾವ ಎಷ್ಟರಮಟ್ಟಿಗೆ ಬಿದ್ದಿತೆಂದರೆ ಅವರು ತಮ್ಮ ಭಾಷೆ (ಸಂಸ್ಕೃತ)ವನ್ನು ಸಹ ನಮ್ಮ ಮೇಲೆ ಹೇರಿದರು ಎಂದು ಸಹ ಓದಿದ್ದೇವೆ. ತಲೆಮಾರುಗಳಿಂದ ಬಂದ ಈ ಚರಿತ್ರೆಯ ನಕ್ಷೆಯನ್ನು ಮುರಿದು ಸತ್ಯವನ್ನು ಅದರ ನಗ್ನತೆಯಲ್ಲಿ ನೋಡಲು ನಿಜವಾಗಿಯೂ ಎಂಟೆದೆ ಬೇಕು. ಇದು ಕಷ್ಟಸಾಧ್ಯದ ಕೆಲಸ. 'ಹಳೆಯ ನಾಗರಿಕತೆಯನ್ನು ಮುಚ್ಚಿರುವ ತೆರೆಯನ್ನು ಸರಿಸುವ ಮೊದಲು ನಾವು ನಮ್ಮ ಮನಸ್ಸಿನ ಮೇಲೆ ಇರುವ ತೆರೆಯನ್ನು ಸರಿಸಬೇಕು' ಎಂದು ಹೇಳುತ್ತಾರೆ ಹಿರಿಯ ಇತಿಹಾಸಜ್ಞರು. ನಿಜವಾಗಿಯೂ ನಮ್ಮನ್ನು ನಾವು ಸಾಕ್ಷೀಭೂತರನ್ನಾಗಿ ಮಾಡಿಕೊಳ್ಳದಿದ್ದರೆ ಸತ್ಯದ ಗೋಚರ ಆಗುವುದಿಲ್ಲ. ಅವರು ಮುಂದುವರೆದು ಹೇಳುತ್ತಾರೆ: 'ಆದಷ್ಟೂ ಮಾಹಿತಿಗಳೇ ಮಾತನಾಡಲು ಬಿಡಬೇಕು. ನಮ್ಮ ಸ್ವರುಚಿಯನ್ನು ಸಂಪೂರ್ಣ ಅಳಿಸಿದರೆ ಮಾತ್ರ ಇದು ಸಾಧ್ಯ....... ಇಷ್ಟಕ್ಕೂ ಮೇಲೆ ನಾವು ನಮ್ಮ ಪ್ರೀತಿಯ ನಂಬಿಕೆ (*pet ideas*)ಗಳನ್ನು ಪುನಃ ವಿಮರ್ಶೆ ಮಾಡಲು ತಯಾರಿರಬೇಕು' (ಜಾರ್ಜ್ ಫ್ಯೂರ್‌ಸ್ಟೀನ್, ಸುಭಾಷ್ ಕಾಕ್ ಮತ್ತು ಡೇವಿಡ್ ಫ್ರಾಲೆ, *In Search of the Cradle of Civili - zation*).

ಈ ಮಾತು ಇಲ್ಲಿ ಏಕೆ ಎಂದು ಕೇಳಬಹುದು. ನಾವೆಲ್ಲ ಚರಿತ್ರೆ ಓದಿದ್ದೇವೆ ಮತ್ತು ಚರಿತ್ರೆ ಬರೆದವರು ಮಾಹಿತಿಗಳನ್ನು ಚೆನ್ನಾಗಿ ಒರೆ ಹಚ್ಚಿಯೇ ಬರೆದಿರುತ್ತಾರೆ, ಮತ್ತಿನ್ನೇನನ್ನು ಪರೀಕ್ಷಿಸುವುದು ಎಂಬ ಭಾವನೆ ಇರಬಹುದು. ಆದರೆ ಪ್ರಕೃತಿಯ ಒಂದು ನಿಯಮ 'ಸತ್ಯಮೇವ ಜಯತೇ'. ಇಂದು ಇದು ಬಹಳ ಪ್ರಭಾವಶಾಲಿಯಾಗಿ ಹೊರ ಬರುತ್ತಿದೆ. ನಿಜ ಹೇಳಬೇಕೆಂದರೆ 'ನಮ್ಮ ಚರಿತ್ರೆಯನ್ನು ಬರೆದವರು ನಾವಲ್ಲ! ಇದನ್ನು ಬರೆದವರು ಯೂರೋಪಿನ ಭಾಷಾತಜ್ಞರು, ಬ್ರಿಟಿಷ್ ಸಾಮ್ರಾಜ್ಯದ ಅಧಿಕಾರಿಗಳು ಮತ್ತು ಕ್ರೈಸ್ತಧರ್ಮಾಧಿಕಾರಿಗಳು' ಎಂದು ಹೇಳುತ್ತಾರೆ ಡಾ. ರಾಜಾರಾಮ್ (*New Light on Vedic India and Ancient Civilization*). ಇವರ್‍ಯಾರೂ ಭಾರತದ ಚರಿತ್ರೆಯ ಬಗ್ಗೆ ಎಳ್ಳಷ್ಟೂ ಚಿಂತಿಸಿದವರಲ್ಲ. ಇವರ್‍ಯಾರಿಗೂ ಸತ್ಯಾನೃತದ ಕಟ್ಟು ಬಾಧೆಗಳು ಇರಲಿಲ್ಲ. ಇವರು ತಮ್ಮ ಸ್ವ-ಉದ್ದೇಶ ಸಾಧನೆಯಲ್ಲಿ ನಿರತರು. ಹೇಗಾದರೂ ಸರಿ ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಮೆರೆದರೆ ಆಯಿತು. ಇದು ಅವರ ಉದ್ದೇಶ. ಇದಕ್ಕಾಗಿ ಅವರು ಬಳಸಿದ ಹಲವಾರು ಕುತಂತ್ರದಲ್ಲಿ ಈ ತಪ್ಪು ಚರಿತ್ರೆಯ ಸೃಷ್ಟಿ ಮತ್ತು ಇದರ ಯಶಸ್ವೀ ಪ್ರಚಾರವು ಬಹಳ ಮುಖ್ಯವಾದದ್ದು.

'ಆರ್ಯರ ಆಕ್ರಮಣ' ಮತ್ತು 'ಸಂಸ್ಕೃತ ಪರಕೀಯ ಭಾಷೆ' ಈ ಬಗ್ಗೆ ಬಹಳ ಹಿಂದಿನಿಂದಲೂ (ಸುಮಾರು ೧೦೦-೧೫೦ ವರ್ಷಗಳ ಹಿಂದೆ) ಅಸಮಾಧಾನ ಇತ್ತು. ನಮ್ಮ ಜನಗಳು ಇದು ಅಸತ್ಯವೆಂದು ಅಂತರಿಕವಾಗಿ ನಂಬಿದ್ದರು. ಇದರ ಮೊದಲ ಪ್ರಕಾಶ ಸ್ವಾಮಿ ವಿವೇಕಾನಂದರ ಋಷಿಸದೃಶ ಉಕ್ತಿ. ಅವರು ಹೇಳುತ್ತಾರೆ: 'ಆರ್ಯರು ಹೊರದೇಶದಿಂದ ದಂಡೆತ್ತಿ ಬಂದು ಇಲ್ಲಿಯ ಮೂಲ ನಿವಾಸಿಗಳ ನೆಲವನ್ನು ಕಿತ್ತುಕೊಂಡು ಅವರನ್ನೆಲ್ಲ ನಿರ್ನಾಮಗೊಳಿಸಿ ಇಲ್ಲಿ ತಳವೂರಿದರು ಎಂದು ನಿಮ್ಮ ಐರೋಪ್ಯ ಪಂಡಿತರು ಹೇಳುತ್ತಾರೆ. ಇದೆಲ್ಲ ಶುದ್ಧ ಸುಳ್ಳು, ಅಸಂಬದ್ಧ ಪ್ರಲಾಪ! ನಮ್ಮ ಭಾರತೀಯ ವಿದ್ವಾಂಸರು ಅದಕ್ಕೆ ತಥಾಸ್ತು ಎನ್ನುತ್ತಿರುವುದು ಮತ್ತೂ ಆಶ್ಚರ್ಯ! ಇಂತಹ ಪೈಶಾಚಿಕ ಸುಳ್ಳುಕಂತೆಯನ್ನು ನಮ್ಮ ಹುಡುಗರಿಗೆ ಬೋಧಿಸುತ್ತಿದ್ದೇವೆ. ಇದು ತುಂಬ ಕೆಟ್ಟದ್ದು. ' ಸ್ವಾಮೀಜಿಯವರ ಈ ಮಾತುಗಳನ್ನು ನಾವು ಇಂದು ವಿ. ಲಕ್ಷ್ಮಿಕಾಂತಮ್,

"ಭಾರತ ನಮ್ಮ ಜನಾಂಗದ ತಾಯ್ನಾಡಾಗಿತ್ತು, ಸಂಸ್ಕೃತ ಯುರೋಪಿಯನ್ ಭಾಷೆಗಳಿಗೆ ಮಾತೃಸ್ಥಾನದಲ್ಲಿತ್ತು. ಅಕೆ ನಮ್ಮ ತತ್ತ್ವಶಾಸ್ತ್ರದ ತಾಯಿ ; ಅರಬರ ಮೂಲಕ ನಮ್ಮ ಬಹುಪಾಲು ಗಣಿತಶಾಸ್ತ್ರದ ತಾಯಿ ; ಬುದ್ಧನ ಮೂಲಕ ಕ್ರೈಸ್ತಧರ್ಮವೂ ಒಳಗೊಂಡಿರುವ ಆದರ್ಶಗಳ ತಾಯಿ; ಹಳ್ಳಿಗಳ ಪಂಚಾಯ್ತಿಗಳ ಮೂಲಕ ಸ್ವಯಮಾಡಳಿತ ಮತ್ತು ಪ್ರಜಾಪ್ರಭುತ್ವದ ತಾಯಿ. ತಾಯಿ ಭಾರತಿ ಇನ್ನೂ ಅನೇಕ ರೀತಿಯಲ್ಲಿ ನಮ್ಮೆಲ್ಲರ ತಾಯಿ." —ವಿಲ್ ಡ್ಯುರಾಂಟ್

ಡಾ.ಎನ್.ಎಸ್. ರಾಜಾರಾಂ, ಕಾಕ್ ಮತ್ತು ಫ್ರಾಲೆ ಇವರುಗಳ ಬರಹಗಳಲ್ಲಿ ಪ್ರತಿಧ್ವನಿತವಾಗಿರುವುದನ್ನು ಕಾಣಬಹುದು. ಅಷ್ಟೇ ಅಲ್ಲದೆ ಇವರುಗಳು ಈ ರೀತಿಯ ಸುಳ್ಳು ಚರಿತ್ರೆಯ ಸೃಷ್ಟಿಗೆ ಕಾರಣ ಸಹ ಕಂಡುಹಿಡಿದಿದ್ದಾರೆ. ಸ್ವಾಮೀಜಿಯವರ ಈ ಮಾತುಗಳು ಇವರುಗಳಿಗೇ ಹೇಳಿದಂತೆ ಇದೆ: '...ನಾನು ಭಾರತೀಯ ಮತ್ತು ಐರೋಪ್ಯ ವಿದ್ವಾಂಸರೊಡನೆ ಈ ವಿಷಯವಾಗಿ ಮಾತನಾಡುತ್ತಿದ್ದೇನೆ... ನಮ್ಮ ವಿದ್ವಾಂಸರಿಗೆ ನಾನು ಹೇಳುವುದು ಇದು : ನೀವು ಪಾಂಡಿತ್ಯವುಳ್ಳವರು, ದಯವಿಟ್ಟು ನಿಮ್ಮ ಹಳೆಯ ಗ್ರಂಥಗಳನ್ನು ಮತ್ತು ಶಾಸ್ತ್ರಗಳನ್ನು ಹುಡುಕಿ ತೆಗೆಯಿರಿ ಮತ್ತು ಸ್ವತಂತ್ರ ಅಧ್ಯಯನ ಮಾಡಿ ನಿಮ್ಮದೇ ನಿರ್ಣಯಕ್ಕೆ ಬನ್ನಿ.' ಪುಸ್ತಕಗಳು ಮಾತ್ರ ಏಕೆ, ಈಗ ಹೊರಬಂದಿರುವ ಇತರ ಆಧಾರಗಳು (ಗಣಿತ, ಉಪಗ್ರಹ ಚಿತ್ರಗಳು ಮುಂತಾದುವು) 'ಆರ್ಯರ ಆಕ್ರಮಣ' ವಾದವನ್ನು ಕುಟ್ಟಿ ಪುಡಿಮಾಡಿವೆ. ಇವುಗಳ ಆಧಾರದ ಮೇಲೆ ನಾವು ನಮ್ಮ ಪೂರ್ವಿಕರ ಬಗ್ಗೆ, ನಮ್ಮ ಸಂಸ್ಕೃತಿ ಬಗ್ಗೆ ಹೆಮ್ಮೆ ಪಡುವಂತಾಗಿದೆ. ಹಾಗೆಯೆ ಅದೇ ಉಸಿರಿನಲ್ಲಿ ಆಶ್ಚರ್ಯ ಸಹ ಆಗುತ್ತದೆ — ತಮ್ಮ ಕಾರ್ಯಸಾಧನೆಗಾಗಿ ಬ್ರಿಟಿಷರು ಸುಮಾರು ೨ ಶತಮಾನಗಳ ಕಾಲ ಹೇಗೆ ಸತ್ಯವನ್ನು ಮುಚ್ಚಿಟ್ಟಿದ್ದರು ಎಂದು!

ಈ ಹೊಸ ಆವಿಷ್ಕಾರದ ಪ್ರಕಾರ ನಮ್ಮ ಸಂಸ್ಕೃತಿ ಸುಮಾರು ಕ್ರಿ.ಪೂ.೭೦೦೦ ವರ್ಷಗಳಷ್ಟು ಹಳೆಯದು ಎಂದು ತಿಳಿದು ಬರುತ್ತದೆ. ಬೈಬಲಿನ ಪ್ರಕಾರ ಪ್ರಪಂಚದ ಹುಟ್ಟು ಕ್ರಿ.ಪೂ. ೪೦೦೪. ಈಗ ನಾವು ಹೆಮ್ಮೆಯಿಂದ ಹೇಳುವಂತಾಗಿದೆ ನಮ್ಮ ವೇದಭಾರತವು ಈ ವೇಳೆಗಾಗಲೆ ನಾಗರಿಕತೆಯ ತುತ್ತತುದಿಯಲ್ಲಿ ಮೆರೆದಾಡುತ್ತಿತ್ತು ಎಂದು. ಇನ್ನೊಂದು ಮಹತ್ತರ ವಿಷಯ ಎಂದರೆ ಈಜಿಪ್ಟ್, ಮೆಸಪಟೋಮಿಯ—ಇವುಗಳು ಮಾನವ ನಾಗರಿಕತೆಯ ತೊಟ್ಟಿಲು ಎಂದು ತಿಳಿದಿದ್ದ ನಾವು ಇವುಗಳ ಬಗ್ಗೆ ಮತ್ತೆ ಚಿಂತನೆ ಮಾಡಬೇಕಾಗಿದೆ. ಈ ಹೆಮ್ಮೆಯ ಸ್ಥಾನ ಸತ್ಯವಾಗಿ ನಮ್ಮ ಸಂಸ್ಕೃತಿಗೆ ಸಲ್ಲಬೇಕಾಗಿದೆ.

ಹೀಗೆ ತಪ್ಪು ಚರಿತ್ರೆಯ ಸೃಷ್ಟಿ ಮತ್ತು ಇದರ ಪ್ರಸರಣಕ್ಕೆ ಹಲವು ಕಾರಣಗಳು. ಈ ಚಿಕ್ಕ ಲೇಖನದಲ್ಲಿ ಇವನ್ನು ಸ್ವಲ್ಪ ತಿಳಿಯುವ ಪ್ರಯತ್ನ ಮಾಡೋಣ.

ತಮ್ಮ ಆಡಳಿತ ಭದ್ರ ಬುನಾದಿಯ ಮೇಲೆ ಇರಬೇಕಾದರೆ ಸ್ಥಾನೀಯ ಜನಗಳ ಸಹಕಾರ ಅತ್ಯಗತ್ಯ ಎಂದು ಬ್ರಿಟಿಷರು ಬಹಳ ಹಿಂದೆಯೇ ತಿಳಿದಿದ್ದರು. ಸ್ಥಾನೀಯರ, ಅದರಲ್ಲೂ ವಿದ್ಯಾವಂತ ಹಿಂದೂಗಳ ಮನಸ್ಸನ್ನು ಬದಲಾಯಿಸಿದರೆ, ಎಂದರೆ ಅವರಿಗೆ ತಮ್ಮ ಆಚಾರ, ತಮ್ಮ ಧರ್ಮ ಸಂಸ್ಕೃತಿಯಲ್ಲಿ ಬೇಸರಿಕೆ ಹುಟ್ಟಿಸಿದರೆ ಕೆಲಸ ಸಾಧಿಸಿದಂತೆ. ಬೇಸತ್ತ ಅವರು ನಿಶ್ಚಯವಾಗಿ ಬೈಬಲ್ ಕಡೆ ತಿರುಗುತ್ತಾರೆ. ಭಾರತದಲ್ಲಿ ಏನೆಲ್ಲ ಹೆಗ್ಗಳಿಕೆ ಇದೆಯೋ ಅದನ್ನೆಲ್ಲ ಹೊರಗಿನಿಂದ ಬಂದದ್ದು ಎಂದು ತೋರಿಸಿದರೆ ನಿಜವಾಗಿ ಜನಗಳು ತಮ್ಮ ಸ್ವಪ್ರತಿಷ್ಠೆ ಕಳೆದುಕೊಳ್ಳುವರು. ಸಂಕ್ಷೇಪವಾಗಿ ಹೇಳುವುದೆಂದರೆ ಭಾರತದಲ್ಲಿ ದೇಶದ್ರೋಹಿಗಳನ್ನು ಸೃಷ್ಟಿಸುವುದು. ಈ ಹಿನ್ನೆಲೆಯಲ್ಲಿಯೇ ಬ್ರಿಟಿಷರು 'ಆರ್ಯರ ಆಕ್ರಮಣ' ತಂತ್ರವನ್ನು ಹರಡಿದ್ದು. ಇದರ ಪ್ರಕಾರ ನಮ್ಮೆಲ್ಲ ಹೆಗ್ಗಳಿಕೆಗಳು, ನಮ್ಮೆಲ್ಲ ಸಂಸ್ಕೃತಿಗಳ ಮೂಲ ಆರ್ಯರು, ಮತ್ತು ಈ ಆರ್ಯರು ಹೊರಗಿನಿಂದ ಬಂದವರು.

ಈ 'ಆರ್ಯರ ಆಕ್ರಮಣ' ಸಿದ್ಧಾಂತವು ರೂಪಿತವಾದದ್ದು ಭಾರತೀಯ ಪ್ರಾಕ್ತನಶಾಸ್ತ್ರವು ಇನ್ನೂ ಶೈಶವಾವಸ್ಥೆಯಲ್ಲಿರುವಾಗ. ಆಗ ಇನ್ನೂ ಜೀವಶಾಸ್ತ್ರ, ಪರಿಸರಶಾಸ್ತ್ರ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದ ವೈಜ್ಞಾನಿಕ ಮಾಹಿತಿಗಳು ಇರಲಿಲ್ಲವೆಂದೇ ಹೇಳಬಹುದು. ಆಗ ವಿದ್ವಾಂಸರು ತೌಲನಿಕ ಭಾಷಾಶಾಸ್ತ್ರವನ್ನೇ ಅವಲಂಬಿಸಬೇಕಾಗಿತ್ತು. ಸಂಸ್ಕೃತ ಮತ್ತು ಐರೋಪ್ಯ ಭಾಷೆಗಳಿಗಿರುವ ನಿಕಟ ಸಂಬಂಧವೇ ಈ ಮೇಲಿನ ಸಿದ್ಧಾಂತಕ್ಕೆ ಆಧಾರವಾಗಿತ್ತು. ಇದರ ಆಧಾರದ ಮೇಲೆ ಈ ಎಲ್ಲ ಭಾಷೆಗಳಿಗೂ ಮೂಲವಾದ ಇಂಡೊ-ಯೂರೋಪಿಯನ್ ಭಾಷೆಯೊಂದಿರಬೇಕು ಮತ್ತು ಈ ಭಾಷೆಗಳನ್ನು ಮಾತನಾಡುವವರೆಲ್ಲರೂ ಒಂದೇ ಭೂಪ್ರದೇಶದಿಂದ (ಮಧ್ಯ ಏಷ್ಯಾದಿಂದ) ಬಂದಿರಬೇಕು ಎಂಬ ತೀರ್ಮಾನಕ್ಕೆ ಬಂದರು. ಅಲ್ಲಿಂದ ವಲಸೆ ಬಂದ ಆರ್ಯರು ಭಾರತವನ್ನು ಆಕ್ರಮಿಸಿ ಇಲ್ಲಿಯ ಮೂಲನಿವಾಸಿಗಳಾದ ದ್ರಾವಿಡರನ್ನು ಸೋಲಿಸಿ ಅವರನ್ನು ದಕ್ಷಿಣ ಭಾರತಕ್ಕೆ ತಳ್ಳಿದರು. ಅನೇಕ ಋಗ್ವೇದ ಮಂತ್ರಗಳಿಗೆ ಇದೇ ಅರ್ಥ ಬರುವಂತೆ ವಿವರಣೆ ನೀಡಲಾಯಿತು.

ಇಪ್ಪತ್ತನೆ ಶತಮಾನದ ಪ್ರಾರಂಭದಲ್ಲಾದ ಸಿಂಧೂ ಸಂಸ್ಕೃತಿಯ ಆವಿಷ್ಕಾರ ಭಾರತದ ಇತಿಹಾಸದ ಮೇಲೆ ಹೊಸ ಬೆಳಕನ್ನು ಚೆಲ್ಲಿತು. ಪ್ರಾರಂಭದ ದೆಸೆಯಲ್ಲಿ ಈ ಹೊಸ ಸಂಸ್ಕೃತಿಯನ್ನೂ 'ಆರ್ಯರ ಆಕ್ರಮಣ' ಸಿದ್ಧಾಂತಕ್ಕೆ ಅನುಗುಣವಾಗಿ ವಿವರಿಸುವ ಪ್ರಯತ್ನ ನಡೆಯಿತು. ಆದರೆ ಹೊಸ ಹೊಸ ಆವಿಷ್ಕಾರಗಳು ಆದಂತೆಲ್ಲ ಈ ವಿವರಣೆ ಅಸಾಧ್ಯವೆಂಬುದು ಕಂಡುಬಂತು. ಹೊಸ ಹೊಸ ಪ್ರದೇಶಗಳಲ್ಲಿ ಉತ್ಖನನದ (*excavation*) ಮೂಲಕ ಈ ಸಂಸ್ಕೃತಿಗೆ ಸಂಬಂಧಿಸಿದಂತೆ ಹೊಸ ಹೊಸ ಪ್ರಾಕ್ತನ ತಥ್ಯಾಂಶಗಳು ಬೆಳಕಿಗೆ ಬರುತ್ತಿವೆ. ಆರ್ಯಸಂಸ್ಕೃತಿಗೆ ಕೇವಲ ವೇದ ಸಾಹಿತ್ಯವೊಂದೆ ಆಧಾರ ವಾಗಿತ್ತು—ಪ್ರಾಕ್ತನ ಅವಶೇಷಗಳಾವುವೂ ಸಿಕ್ಕಿರಲಿಲ್ಲ. ಈಗ ದೊರೆತಿರುವ ಪ್ರಾಕ್ತನ ಅವಶೇಷಗಳ ಆಧಾರದ ಮೇಲೆ ಸಿಂಧೂ

ಮತ್ತು ವೈದಿಕ ಸಂಸ್ಕೃತಿ ಒಂದೇ ಎಂದೂ ಆರ್ಯರು ಹೊರಗಿನಿಂದ ಬಂದವರಲ್ಲ ವೆಂದೂ ಸಾಬೀತು ಪಡಿಸಲಾಗುತ್ತಿದೆ.

ಇದಕ್ಕೆ ಕೆಲವು ವೈಜ್ಞಾನಿಕ ಪುರಾವೆಗಳೂ ಇವೆ. ಭಾರತೀಯರಲ್ಲಿ ಯುರೇಷಿಯಾ ಅಥವಾ ಯೂರೋಪಿಯನರ ಜೆನೆಟಿಕ್ ಲಕ್ಷಣಗಳು ಇಲ್ಲವೆಂದೇ ಹೇಳಬಹು ದಾದಷ್ಟು ಅತ್ಯಲ್ಪ ಪ್ರಮಾಣದಲ್ಲಿ ಇವೆ ಯಂತೆ. ಅಷ್ಟೇ ಅಲ್ಲದೆ, ಈ ಅತ್ಯಲ್ಪ ಪ್ರಮಾಣದ ಲಕ್ಷಣಗಳೂ ಕೂಡ ಉತ್ತರ ಮತ್ತು ದಕ್ಷಿಣ ಭಾರತೀಯರಲ್ಲಿ ಸಮಾನ ವಾಗಿವೆಯಂತೆ. ಇದು ಭಾರತೀಯರೆಲ್ಲರೂ ಇಲ್ಲಿಯ ಮೂಲನಿವಾಸಿಗಳು, ಹೊರಗಿನಿಂದ ಬಂದವರಲ್ಲ ಎಂಬುದನ್ನು ತೋರಿಸುತ್ತದೆ.



ಮೊಹೆಂಜದಾರೋವಿನಲ್ಲಿ ಸಿಕ್ಕ ಮೂರ್ತಿ. ಇದು ಪುರೋಹಿತನದಾಗಿರಬಹುದೆಂದು ನಂಬಲಾಗಿದೆ.

ಎರಡನೆಯದಾಗಿ ಆರ್ಯರು ತುಂಬಿ ಹರಿಯುತ್ತಿದ್ದ ಸಿಂಧು ಮತ್ತು ಅದರ ೫ ಉಪನದಿಗಳನ್ನು ದಾಟಿ ಬಂದು ಒಣಗಿದ ಸರಸ್ವತೀ ನದೀ ದಂಡೆಯ ಮೇಲೆ ತಮ್ಮ ನಾಗರಿಕತೆ ಬೆಳೆಸಲು ನಿಜವಾಗಿ ಹುಚ್ಚರೇ ಇರಬೇಕು!

ಮೂರನೆಯದಾಗಿ ಪೂರ್ವ ಇರಾನ್ ನಿಂದ ಹಿಡಿದು ಭಾರತದ ವಾಯವ್ಯ ಪ್ರದೇಶ ದವರೆಗೆ ಹಲವೆಡೆಗಳಲ್ಲಿ ಯಜ್ಞಮಂಟಪಗಳ ಪಳೆಯುಳಿಕೆಗಳು ದೊರೆತಿವೆ. ಒಂದೇ ರೀತಿ ಇರುವ ಇವುಗಳು, ಇವನ್ನು ಉಪಯೋಗಿಸು ತ್ತಿದ್ದ ಜನರು ಯಜ್ಞ ಯಾಗಾದಿಗಳನ್ನು ಮಾಡುತ್ತಿದ್ದ ವೇದ ಸಂಸ್ಕೃತಿಯವರು ಎಂದು ತಿಳಿಯುತ್ತದೆ. ಈ ಯಜ್ಞ ಮಂಟಪದ ರಚನೆಗೆ ಬೇಕಾದ ನಿಯಮಗಳನ್ನು ನಾವು ವೇದದ ಸುಲಭ ಸೂತ್ರಗಳಲ್ಲಿ ಕಾಣುತ್ತೇವೆ. ಇಲ್ಲೂ ಸಹ ಒಂದು ಅಸಹಜ ಸ್ಥಿತಿ ಬರುತ್ತದೆ. 'ಆರ್ಯರ ಆಕ್ರಮಣ' ಸಿದ್ಧಾಂತ ಒಪ್ಪಿಕೊಂಡರೆ ಯಜ್ಞ ಕುಂಡಗಳನ್ನು ಮೊದಲು ರಚಿಸಿ ಅದಕ್ಕೆ ಬೇಕಾದ ನಿಯಮಗಳನ್ನು ನಂತರ ರಚಿಸಿದ ಅಸ್ವಾಭಾವಿಕ, ಅವೈಜ್ಞಾನಿಕ ಸ್ಥಿತಿಯನ್ನು ಪೋಷಿಸಿದಂತೆ ಆಗುತ್ತದೆ. ವಿಜ್ಞಾನದಲ್ಲಿ ಇಂತಹ ಅಪಹಾಸ್ಯಕ್ಕೆ ಎಡೆ ಇಲ್ಲ.

ಋಗ್ವೇದದ ಹಲವೆಡೆಗಳಲ್ಲಿ ಸರಸ್ವತಿ ನದಿಯ ವರ್ಣನೆ ಇದೆ. ಸರಸ್ವತಿಯನ್ನು ಶ್ರೇಷ್ಠ ಮಾತೆ, ಶ್ರೇಷ್ಠ ನದಿ, ಶ್ರೇಷ್ಠ ದೇವತೆ ಎಂದೆಲ್ಲ ವರ್ಣಿಸಲಾಗಿದೆ. ಸರಸ್ವತಿ ನದಿ ನಾಗರಿಕತೆಯ ಬೆನ್ನೆಲುಬು. ಇದರಲ್ಲಿ ಸಂಶಯವೆ ಇಲ್ಲ. ಶ್ರೀ ವಿ.ಎಸ್. ವಾರನಕರ್ ಅವರು ತಮ್ಮ ತಂಡದ ಸಹಾಯದಿಂದ ಮಾಡಿದ ಹಲವಾರು ವಿಷಯಗಳ ಸಂಶೋಧನೆಯ ಸಹಾಯದಿಂದ ನಾವು ಇಂದು ದೃಢವಾಗಿ ೩ ಅಂಶಗಳನ್ನು ತಿಳಿಯಬಹುದು :

**೧. ಸಿಂಧೂ ಬಯಲಿನ ನಾಗರಿಕತೆ ಎಂದು ನಾವು ತಿಳಿದಿದ್ದ ನಾಗರಿಕತೆಯು ನಿಜಾಂಶದಲ್ಲಿ ಸರಸ್ವತಿ ಬಯಲಿನಲ್ಲಿ ಬೆಳೆದು ಬಂದದ್ದು.**

**೨. ವೇದದಲ್ಲಿ ಇರುವ ಸರಸ್ವತಿ ವರ್ಣನೆ ಸತ್ಯಾಂಶದಿಂದ ಕೂಡಿದ್ದು.**

**೩. ಸರಸ್ವತಿನದಿ ಹಲವು ಸಲ ತನ್ನ ಪ್ರವಾಹದ ದಿಕ್ಕನ್ನು ಬದಲಿಸುತ್ತಿತ್ತು. ಕೊನೆಗೆ ಕ್ರಿ.ಪೂ. ೧೯೦೦ರಲ್ಲಿ ಒಣಗಿಹೋಯಿತು.**

ಆರ್ಯರು ಭಾರತಕ್ಕೆ ಸುಮಾರು ಕ್ರಿ.ಪೂ ೧೫೦೦ರಲ್ಲಿ ಬಂದರು ಎಂದು ಒಪ್ಪಿದಾದಲ್ಲಿ ಋಗ್ವೇದದ ಕಾಲ ಸುಮಾರು ಕ್ರಿ.ಪೂ. ೧೨೦೦ ವರ್ಷಗಳು ಎಂದಾಗುತ್ತದೆ. (ಈ ಎಲ್ಲ ಕಾಲಗಳು ಮ್ಯಾಕ್ಸ್ ಮುಲ್ಲರರ ಪ್ರಕಾರ. ಇವರು ಭಾಷಾಜ್ಞಾನ ಮತ್ತು ಆಗಿನ ಬರಹ ಗಳನ್ನು ಆಧರಿಸಿ ಈ ಕಾಲನಿರ್ಣಯ ಮಾಡಿರುವರೆಂದು ನಂಬಿಕೆ. ಡಾ.ರಾಜಾರಾಮ್‌ರವರ ಪ್ರಕಾರ ಈ ಎಲ್ಲ ಕಾಲನಿರ್ಣಯವನ್ನು ತಮ್ಮ ಧಾರ್ಮಿಕ ನಂಬಿಕೆಗೆ ಅವರು ಹೊಂದಿಸಿ ಮಾಡಿದ್ದಾರೆ ಎಂದು.) ಈಗ ಒಂದು ಅಸಹಜ ಪರಿಸ್ಥಿತಿ ಏಳುತ್ತದೆ. ಕ್ರಿ.ಪೂ. ೧೯೦೦ರಲ್ಲಿ ಬತ್ತಿದ ಸರಸ್ವತಿ ನದಿಯನ್ನು ಕ್ರಿ.ಪೂ. ೧೫೦೦ ರಲ್ಲಿ ಬಂದ ಆರ್ಯರು ತಮ್ಮ ಋಗ್ವೇದದಲ್ಲಿ (ಸುಮಾರಿಗೆ ೧೨೦೦ ಕ್ರಿ.ಪೂ) ಹೇಗೆ ಅಷ್ಟು ಪರಿಣಾಮಕಾರಿಯಾಗಿ ವರ್ಣಿಸಲು ಸಾಧ್ಯ? ಇದು ಹಾಸ್ಯಾಸ್ಪದ.

ನಾಲ್ಕನೆಯದಾಗಿ ನಮಗೆ ದೊರೆತಿರುವ (ಲೋಹನಿರ್ಮಿತ) 'ವಸಿಷ್ಠನ ತಲೆ' ವೈಜ್ಞಾನಿಕವಾಗಿ ಸುಮಾರು ಕ್ರಿ.ಪೂ.೩,೭೦೦ ವರ್ಷ ಗಳಷ್ಟು ಹಳೆಯದು. ಅಂದರೆ ಆರ್ಯರ ಆಗಮನಕ್ಕೆ ಸುಮಾರು ೨೦೦೦ ವರ್ಷಗಳಷ್ಟು ಹಿಂದೆ ಇದನ್ನು ತಯಾರಿಸಿದ್ದು. ಇದು 'ವಸಿಷ್ಠನ ತಲೆ'ಯೇ ಎಂಬುದರಲ್ಲಿ ಭಿನ್ನಾಭಿಪ್ರಾಯ ಇದ್ದರೂ ಇದರ ಕಾಲದ ವಿಷಯದಲ್ಲಿ ನಾವು ಸಂಶಯ ಪಡುವಂತಿಲ್ಲ. ಅಂದರೆ ಸುಮಾರು ಕ್ರಿ.ಪೂ.೪೦೦೦ ವರ್ಷಗಳಲ್ಲೇ ಇಲ್ಲಿ ಸಂಸ್ಕೃತಿ ಮತ್ತು ನಾಗರಿಕತೆಯು ಚೆನ್ನಾಗಿ ಬೆಳೆದಿತ್ತು ಮತ್ತು ಅದು ತನ್ನ ಹಿರಿಮೆಯ ಉತ್ತುಂಗ ಶಿಖರದಲ್ಲಿ ಮೆರೆದಾಡುತ್ತಿತ್ತು ಎಂದಾಯಿತು. ಹೀಗೆ ಗಣಿತ, ಖಗೋಳಶಾಸ್ತ್ರ, ಉಪಗ್ರಹ ಚಿತ್ರಗಳು ಮೇಲಾಗಿ ಮುಕ್ತ ಮನಸ್ಸು (*open mindedness*) ಇವುಗಳಿಂದ ನಾವು ಆರ್ಯರು ಹೊರಗಿನಿಂದ ಬಂದವರಲ್ಲ ಎಂದು ತಿಳಿಯಬಹುದು. ಮೇಲಾಗಿ 'ಆರ್ಯ' ಎಂಬ ಪದಕ್ಕೆ ಸಂಭಾವಿತ, ಶ್ರೇಷ್ಠ ಎಂಬ ಅರ್ಥವೇ ಹೊರತು ಪರಕೀಯನೆಂದಲ್ಲ. ನಮ್ಮ ಸಂಸ್ಕೃತಿ, ನಮ್ಮ ಚರಿತ್ರೆಯನ್ನು ನಾವು ಸತ್ಯದ ಬೆಳಕಿನಲ್ಲಿ ತಿಳಿದು, ಬರೆದು ನಮ್ಮ ಯುವ ಪೀಳಿಗೆಗೆ ಕೊಡಬೇಕು. ಆರ್ಯರು ಎಂದು ಕರೆಸಿಕೊಳ್ಳಲು ನಾವುಗಳು ನಾಚಬೇಕಾಗಿಲ್ಲ. ರಾಮನು ಸಹ ಆರ್ಯಪುತ್ರ. ನಾವು ಸಹ ಆರ್ಯ ಪುತ್ರರು. ಮೇಲಾಗಿ ನಮ್ಮ ಚರಿತ್ರೆಯ ನಿಜಾಂಶವನ್ನು ನಾವು ಸರಿಯಾಗಿ ಅರ್ಥಮಾಡಿಕೊಂಡಲ್ಲಿ ಈಗ ನಮ್ಮಲ್ಲಿರುವ ಉತ್ತರ-ದಕ್ಷಿಣ ವಿಷಮತೆಯನ್ನೂ ಕೊನೆಗಾಣಿಸಬಹುದು. ಆರ್ಯರೂ ನಾವೇ, ದ್ರಾವಿಡರು ನಾವೇ ಎಂದು ತಿಳಿದಾಗ ಭೇದ ಎಲ್ಲಿಂದ ಬರಲು ಸಾಧ್ಯ? ♣